ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ
(ಆರ್.ಪಿ ಸಂಖ್ಯೆ 57)
ನಮೂನೆ ಸಂಖ್ಯೆ-4
(ಸಿವಿಲ್))

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ.ನಂಃ125/2010**

ಚಾಸಾ ಃ 1

| | | |
|---|---|---|
| ಹೆಸರು | : | ಶಬ್ಬಿರಮಿಯಾ |
| ತಂದೆಯ ಹೆಸರು | : | ಅಮೀರ ಪಟೇಲ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಅಬಕಾರಿ ಉಪ-ನಿರೀಕ್ಷಕರು, ಚಿತ್ತಾಪೂರ |
| ವಾಸಸ್ಥಳ | : | ಶಹಾಬಾದ್ |
| ದಿನಾಂಕಃ | ಃ | 05-09-2017 ಸತ್ಯಪ್ರತಿಜ್ಞೆ ಮೇರಗೆ |

**ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-**

ನಾನು ನವೆಂಬರ್ 2012 ರಿಂದ ಜುಲೈ 2017 ರವರೆಗೆ ಉಪ-ವಿಭಾಗ ಚಿತ್ತಾಪೂರದಲ್ಲಿ ಅಬಕಾರಿ ಉಪ-ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 21-05-2014 ರಂದು ನ್ಯಾಯಾಲಯದಿಂದ 1 ಮತ್ತು 3ನೇ ಆರೋಪಿತರ ಉದ್ಘೋಷಣೆ ವಾರೆಂಟ್‌ನ್ನು ಜಾರಿ ಮಾಡಲು ಆದೇಶಿಸಿದ್ದು ಅದರಂತೆ ಕಲಬುರಗಿಯ ಉಪ-ಆಯುಕ್ತರು ನನ್ನನ್ನು ಉದ್ಘೋಷಣೆ ವಾರೆಂಟನ್ನು ಜಾರಿ ಮಾಡಲು ನನ್ನನ್ನು ನೇಮಕ ಮಾಡಿದ್ದರು. ದಿನಾಂಕ 10-06-2014 ರಂದು 3 ನೇ ಆರೋಪಿತನ ವಿಳಾಸವಾದ ತಮಿಳುನಾಡಿನ ಪುದುಕೋಟಿಯ ಜಿಲ್ಲೆಯ ಪೋಲೀಸರನ್ನು ಸಂಪರ್ಕಿಸಿ ಅವರ ಮೂಲಕ ಉದ್ಘೋಷಣೆಯನ್ನು ಜಾರಿ ಮಾಡಲು ಸಹಾಯ ಮಾಡುವಂತೆ ಮನವಿ ಸಲ್ಲಿಸಿದ್ದು ಸಾಕ್ಷಿ ತಾವು ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದರಂತೆ ಪ್ರಾದೇಶಿಕ ಪೋಲೀಸರ ಸಹಾಯದೊಂದಿಗೆ ಆರೋಪಿಯ ವಿಳಾಸವಾದ ಪುದುಕೋಟೆ ನಗರದ 3ನೇ ಕ್ರಾಸ್, ಸೌತ್ ಮೇನ್ ರೋಡ, ಓಲ್ಡ್ ನಂ.5, ಹೊಸ ಮನೆ. ನಂ.245 ವಿಳಾಸಕ್ಕೆ ಹೋಗಿ ವಿಚಾರಿಸಲಾಗಿ ಆ ಮನೆಯಲ್ಲಿ ಮತ್ತು ಆ ವ್ಯಾಪ್ತಿಯಲ್ಲಿ ನಾರಾಯಣ ಎಂಬ ವ್ಯಕ್ತಿ ಯಾರೂ ಇರುವುದಿಲ್ಲ ಎಂದು ತಿಳಿಸಿದ್ದು ನಾನು ಸ್ಥಳದಲ್ಲಿ 1. ಗೋವಿಂದಂ ತಂದೆ ಮುರುಗನ್, 2. ವಸಂತಂ ತಂದೆ ಬಾಲಮರಿ, 3. ಶಿವಾ ತಂದೆ ರಾಜನ್ 4. ಕುಮಾರನ್ ತಂದೆ ಆರ್ಮುಗಂ, 5.ಗೋಪಿ ತಂದೆ ನಾರಾಯಣನ್ ಇವರನ್ನು ಕರೆಯಿಸಿ ಸ್ಥಳದಲ್ಲಿ ಪಂಚನಾಮೆ ಮಾಡಿ ಪಂಚರ ಸಮಕ್ಷಮ ಉದ್ಘೋಷಣೆ ವಾರೆಂಟನ್ನು ಮೇಲ್ಕಂಡ ವಿಳಾಸದ ಮನೆಯ ಮಾಲೀಕರು ಉದ್ಘೋಷಣೆ ವಾರೆಂಟನ್ನು ಮನೆಯ ಮುಂದೆ ಅಂಟಿಸಲು ತಕರಾರು ಮಾಡಿದ್ದರಿಂದ ಆ ಉದ್ಘೋಷಣೆ ವಾರೆಂಟನ್ನು ಮನೆಯ ಪಕ್ಕದಲ್ಲಿದ್ದ ಒಂದು ಲೈಟಿನ ಕಂಬಕ್ಕೆ ಅಂಟಿಸಿ ಮಹಜರ್ ಕ್ರಮ ಜರುಗಿಸಿರುತ್ತೇನೆ.ಸಾಕ್ಷಿ ತಾವು ತಯಾರಿಸಿದ ಮಹಜರ್‌ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು

ಗುರುತಿಸಲಾಯಿತು. ನಂತರ ತಹಸಿಲ್ದಾರ ಕಚೇರಿಗೆ ಬೇಟಿ ನೀಡಿ ತಹಸಿಲ್ದಾರರವರಿಗೆ ಮಾಹಿತಿ ನೀಡಿ ವಾರೆಂಟನ್ನು ತಹಸಿಲ್ದಾರ ಕಚೇರಿಯ ನೋಟಿಸು ಬೋರ್ಡಿಗೆ ಆರೋಪಿಯ ಉದ್ಘೋಷಣೆ ವಾರೆಂಟನ್ನು ಅಂಟಿಸಿ ಅನಂತರ ತಹಸಿಲ್ದಾರರವರಿಗೆ ಆರೋಪಿಗೆ ಸಂಬಂಧಿಸಿದ ಸ್ಥಿರ ಆಸ್ತಿ ಇರುವ ಬಗ್ಗೆ ಮಾಹಿತಿ ನೀಡುವಂತೆ ಮನವಿ ಪತ್ರ ಸಲ್ಲಿಸಿದ್ದೇನೆ, ಸಾಕ್ಷಿ ತಾವು ಸಲ್ಲಿಸಿದ್ದ ಮನವಿ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಎಪಿಪಿ ಅವರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಪ್ರ.ದ. ನ್ಯಾ.ದಂ. ಚಿಂಚೋಳಿ